## 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ

**ಎಸ್.ಸಿ. 5036/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : ಬಾಬು | **ಪ್ರಮಾಣ ವಚನ ಭೋಧಿಸಿದ ದಿನಾಂಕ** | |
| **ತಂದೆ ಹೆಸರು** | : ಕೆಂಚಶೆಟ್ಟಿ | **22.07.2026** | |
| **ವಯಸ್ಸು** | : 40 ವರ್ಷ | | |
| **ವೃತ್ತಿ** | : ವ್ಯವಸಾಯ | **ಪ್ರಾ.ಸಾಃ** | **11** |
| **ವಾಸ ಸ್ಥಳ** | : ಕೊಳ್ಳೇಗಾಲ ಮೋಳೆ | **ಚಾ.ಸಾಃ** | **24** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ನನಗೆ ಆರೋಪಿ ಗೊತ್ತು. ಮೃತ ಸೋನಾಕ್ಷಿ ಗೊತ್ತು. ಚಾಸಾ 2 ಗೊತ್ತು. ನಾವೆಲ್ಲರೂ ಒಂದೇ ಗ್ರಾಮದವರು. ಚಾಸಾ 2 ಮತ್ತು ಮೃತ ಸೋನಾಕ್ಷಿ ಅಜ್ಜಿ-ತಾತನ ಮನೆಯಲ್ಲಿ ಇದ್ದರು. ಮೃತ ಸೋನಾಕ್ಷಿಗೆ ಇಬ್ಬರು ಮಕ್ಕಳಿದ್ದರು. ಮೃತ ಸೋನಾಕ್ಷಿ ಮತ್ತು ವಿಜಯಕುಮಾರ್ ನಡುವೆ ಅನ್ಯೋನ್ಯತೆ ಇರಲಿಲ್ಲ. ಚಾಸಾ 2 - ವಿಜಯಕುಮಾರ್ ವ್ಯವಸಾಯ ಮಾಡುತ್ತಿದ್ದರು ಆರೋಪಿಯ ವಿಚಾರಕ್ಕಾಗಿ ಮೃತ ಸೋನಾಕ್ಷಿ ಮತ್ತು ಚಾಸಾ 2 ರವರ ನಡುವೆ ಜಗಳ ಆಗುತ್ತಿತ್ತು. ಚಾಸಾ 2 ರವರು ಮೃತ ಸೋನಾಕ್ಷಿ ಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿರಲಿಲ್ಲ. ಮೃತ ಸೋನಾಕ್ಷಿ ಮತ್ತು ಆಕೆಯ ಅಜ್ಜಿ ಸೌದೆ ತೆಗೆದುಕೊಳ್ಳಲು ನನ್ನ ಜಾಗಕ್ಕೆ ಬರುತ್ತಿದ್ದರು. ಆಕೆ ನನ್ನ ಬಳಿ ಹಣ ಕೇಳುತ್ತಿದ್ದಳು. ಜನವರಿ 2025ರಲ್ಲಿ ಮೃತ ಸೋನಾಕ್ಷಿ ನನ್ನ ಬಳಿ ಕೇಳಿದ್ದಳು. ನಾನು ರೂ. 500 ಹಣ ನೀಡಿದೆ. ನಂತರ ನಾನು ಆಕೆಯೊಂದಿಗೆ ಲೈಂಗಿಕ ಸಂಪರ್ಕ ಹೊಂದಿರುತ್ತೇನೆ. ನಂತರ ನಾನು ಮೃತ ಸೊನಾಕ್ಷಿಗೆ ರೂ. 2000/- ಹಣ

ನೀಡಿರುತ್ತೇನೆ. ಆ ಸಮಯದಲ್ಲೂ ನಾನು ಆಕೆಯೊಂದಿಗೆ ಲೈಂಗಿಕ ಸಂಬಂಧ ಹೊಂದಿರುತ್ತೇನೆ. ನಾನು ಮೃತ ಸೋನಾಕ್ಷಿ ಒಂದ ಎರಟೆಲ್ ಸಿಮ್ ಅನ್ನು ತೆಗೆದುಕೊಟ್ಟಿರುತ್ತೇನೆ. ಸದರಿ ಸಿಮ್ ನನ್ನ ಹೆಸರಿನಲ್ಲೇ ಇತ್ತು. ನಂತರ ನಾನು ಮೃತ ಸೋನಾಕ್ಷಿ ಯೊಂದಿಗೆ ಮಾತನಾಡುತ್ತಿರಲಿಲ್ಲ. ಫೆಬ್ರುವರಿ 2025 ರಲ್ಲಿ ಬೆಳಗ್ಗೆ 8.30-9.00 ಗಂಟೆ ಸಮಯದಲ್ಲಿ ನನಗೆ ದೂರವಾಣಿ ಕರೆ ಮಾಡಿ ನಾನು ಮನೆ ಬಿಟ್ಟು ಬಂದಿದ್ದೇನೆ ಸಹಾಯ ಮಾಡಿ ಎಂದು ಕೇಳಿದಳು. ನನಗೆ ಯಾವುದಾದರೂ ಕೆಲಸ ಕೊಡಿಸಿ ಎಂದು ಕೇಳಿಕೊಂಡಳು. ನಾನು ಟಿ. ನರಸೀಪುರಕ್ಕೆ ಹೋಗಿ ಮೃತ ಸೋನಾಕ್ಷಿಯನ್ನು ಕರೆದುಕೊಂಡು ನಮ್ಮ ಇಟ್ಟಿಗೆ ಫ್ಯಾಕ್ಟರಿಯಲ್ಲಿ ಕೆಲಸ ಕೊಟ್ಟಿರುತ್ತೇನೆ. ನಾನು ಜಮೀನು ಕೆಲಸಕ್ಕೆ ಹೋಗಿ ಬಂದು ನೋಡಿದಾಗ ಸೋನಾಕ್ಷಿ ಮತ್ತು ಆರೋಪಿ ಜೊತೆಯಲ್ಲಿ ಇದ್ದರು. ನಾನು ಸೋನಾಕ್ಷಿ ಮತ್ತು ಆರೋಪಿಯನ್ನು ಇಲ್ಲಿರುವುದು ಬೇಡ ಎಂದು ಕಳುಹಿಸಿದೆ. ನಂತರ ಸೋನಾಕ್ಷಿ ಮೃತಪಟ್ಟಿರುವ ವಿಚಾರ ಗೊತ್ತಾಯಿತು. ಆಕೆಯ ಕೊಲೆಯಾಗಿದೆ ಎಂಬ ವಿಚಾರ ಗೊತ್ತಾಯಿತು. ಆರೋಪಿ ಮತ್ತು ಸೋನಾಕ್ಷಿ ಬಸ್ತಿಪುರದಲ್ಲಿ ಬಾಡಿಗೆ ಮನೆಯಲ್ಲಿ ಇದ್ದಾರೆ ಎಂಬ ವಿಚಾರ ಗೊತ್ತಾಯಿತು. ಆರೋಪಿ ಮತ್ತು ಸೋನಾಕ್ಷಿ ಜಗಳ ಆಗಿದ್ದ ವಿಚಾರ ಗೊತ್ತಿಲ್ಲ. ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೇಳಿದ್ದಾರೆ, ಅನುಮತಿ ನೀಡಿದೆ)

**ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ನಾನು ಮೃತ ಸೋನಾಕ್ಷಿಯನ್ನು ಟಿ. ನರಸೀಪುರದಿಂದ ಕರೆದುಕೊಂಡು ಬಂದು ಆಕೆಗೆ ನನ್ನ ಇಟ್ಟಿಗೆ ಫ್ಯಾಕ್ಟರಿಯಲ್ಲಿ ಕೆಲಸ ಕೊಡಿಸಿದ ನಂತರ ಆಕೆಯೊಂದಿಗೆ ದೈಹಿಕ ಸಂಪರ್ಕ ಇಟ್ಟುಕೊಂಡಿದ್ದೆ ಎಂದರೆ ಸರಿಯಲ್ಲ. ನನ್ನ ಜೊತೆ ಸೋನಾಕ್ಷಿ ಲೈಂಗಿಕ ಸಂಪರ್ಕ ಇಟ್ಟುಕೊಂಡಿದ್ದಳು ಎಂಬ ಕಾರಣಕ್ಕೆ ಆರೋಪಿ ಮತ್ತು ಸೋನಾಕ್ಷಿ ನಡುವೆ ಜಗಳ ಆಗಿರುತ್ತದೆ ಎಂಬ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ಆರೋಪಿ ಮೃತಳನ್ನು ಸುವರ್ಣವತಿ ಹೊಳೆಯ ಬಳಿ ಕರೆದುಕೊಂಡು ಹೋಗಿ

ಆಕೆಯನ್ನು ಕೊಲೆ ಮಾಡಿರುತ್ತಾನೆ ಎಂಬ ವಿಚಾರ ಗೊತ್ತಾಯಿತು ಎಂದರೆ ಸರಿಯಲ್ಲ. ನಾನು ಮೃತಳು ವಿವಾಹವಾಗಿ ಎರಡು ಮಕ್ಕಳಿರುವ ವಿಚಾರ ಗೊತ್ತಿದ್ದರೂ ಆಕೆಯೊಂದಿಗೆ ಲೈಂಗಿಕ ಸಂಪರ್ಕ ಹೊಂದಿದ್ದು ಮೃತಳನ್ನು ಆ ಕಾರಣಕ್ಕಾಗಿಯೇ ಆರೋಪಿಯು ಕೊಲೆ ಮಾಡಿರುತ್ತಾನೆ ಎಂದರೆ ಸರಿಯಲ್ಲ . ನಾನು ಪೋಲಿಸರಿಗೆ ನಿಪಿ 82 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ .

**ಸಾಕ್ಷಿಯನ್ನು ದಿಃ 22.07.2026 ರಂದು ಪುನಃ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ– ಶ್ರೀ ಎಂ.ಎಂ.ಪಿ ವಕೀಲರಿಂದ**

ಇಲ್ಲ ಎಂದು ಹೇಳುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ